ನಿಂತಿದ್ದ. ಅವನ ಬೈಕ್ ಮೇಲೆ ಅವನ ರೂಮಿಗೆ ಬಂದು ಕೈ ಕಾಲು ಮುಖ ತೊಳಕೊಂಡು ಹೊಂಟ. ಸುಸ್ತು ಅನಿಸಿತು. ಹೋಟಲಿಗೆ ಬಂದು ಊಟಕ್ಕ ಕೂತರ ನಾಕು ತುತ್ತು ಉಂಡು ಕೈ ತೊಳಕೊಂಡ. ನಾಕು ಗಂಟೆಯ ಸುಮಾರಿಗೆ ಕಂಪನಿಯ ವಾಹನ ಬರುವುದಿತ್ತು. ಆಸ್ಪತ್ರೆಯಲ್ಲಿ ಇಬ್ಬರೂ ಕಾದರು. ಗಾಡಿ ಬರಲಿಲ್ಲ. ಪೂನಾದ ಆಫೀಸಿಗೆ ಫೋನು ಹಚ್ಚಿ ಕೇಳಿದರೆ ಏನೋ ತೊಂದರೆಯಾಗಿದ್ದು ಮರುದಿನ ಬಿಡುವುದಾಗಿ ಉತ್ತರ ಬಂತು. ಮೈ ಬಿಸಿ ಅನಿಸಿ ಟೆಸ್ಟ್ ಮಾಡಿಸಿದರೆ ಕೊರೊನಾ ಪಾಸಿಟಿವ್ ಅಂತ ರಿಪೋರ್ಟ್ ಬಂತು. ಕೊಲ್ಲಾಪುರದಲ್ಲಿ ಕೊರೊನಾ ಕೇಸುಗಳು ಜಾಸ್ತಿ ಆಗತೊಡಗಿದ್ದವು. ಹಾಗಂತ ಮಹಾರಾಷ್ಟ್ರ ಗಡಿಯನ್ನು ಕರ್ನಾಟಕ ಸರಕಾರ ಏಕಾಏಕಿ ಬಂದು ಮಾಡಿಬಿಟ್ಟಿತು. ಜಗದೀಶ ಮನಿಗೆ ಮತ್ತು ಗಣೇಶನಿಗೆ ಫೋನು ಮಾಡಿ 'ನಾನು ಆರಾಮ ಇದ್ದೀನಿ, ರಸ್ತೆ ಬಂದ್ ಆಗೇತಿ. ಹೀಗಾಗಿ ಇಲ್ಲಿ ಸಿಕ್ಕೊಂಡೀನಿ, ಬರೋದು ತಡ ಆಗತೈತಿ' ಅಂತ ತಿಳಿಸಿದ. ಕೊಲ್ಲಾಪುರದ ಗೆಳೆಯ ತಡ ಮಾಡದೇ ಅವತ್ತೇ ಜಗದೀಶನನ್ನ ಅಡ್ಮಿಟ್ ಮಾಡಿದ.

ಗಣೇಶ, ಗೆಳೆಯ ಜಗದೀಶ ಮರು ದಿನ ವೆಂಟಲೇಟರ್‌ದೊಂದಿಗೆ ಬಂದೇ ಬರ್ತಾನ, ಇಮಾಮಸಾಬ ಮತ್ತು ಅವನ ಹೆಂಡತಿಗೆ ಅಷ್ಟೇ ಅಲ್ಲ, ಇನ್ನುಳಿದ ರೋಗಿಗಳಿಗೂ ಉಪಯೋಗ ಆಗತದೆ ಅಂತ ಬಹಳ ಭರೋಸಾ ತಳೆದಿದ್ದ. ಏನು ಮಾಡೋದು, ತಾನೊಂದು ಬಗೆದರ ದೈವವೊಂದು ಬಗೀತು ಅಂತಾರಲ್ಲ, ಹಾಗಾಯಿತು. ಒಂದು ವಾರ ಕಳೀತು. ಜಗದೀಶ ಬರಲಿಲ್ಲ.

ಇತ್ತ ಡಾಕ್ಟರು ಮತ್ತು ರೋಗಿಗಳು ಆಸ್ಪತ್ರೆಯಲ್ಲಿ ಹೋರಾಟ ನಡೆಸಿದ್ದರು. ಬಹುಮಟ್ಟಿಗೆ ವ್ಯರ್ಥ ಪ್ರಯಾಸ ನಡೆದಿತ್ತು. ಇಮಾಮಸಾಬ ಮತ್ತು ಅವನ ಹೆಂಡತಿಯ ಪರಿಸ್ಥಿತಿ ಗಂಭೀರ ಆಗುತ್ತಾ ಬಂತು. ಕೇಳಿದರೆ ಡಾಕ್ಟರು 'ಕ್ರಿಟಿಕಲ್, ಪ್ರಯತ್ನಿಸ್ತಿದ್ದೀವಿ' ಅಂದರು. ಹೆಂಡತಿಯ ಕೂಡ ಹೋಲಿಸಿದರೆ ಗಟ್ಟಿಯಿದ್ದ ಇಮಾಮಸಾಬನೇ ಮೊದಲು ಹೋಗಿಬಿಟ್ಟ. ಅವನ ದೇಹವನ್ನ ಶವಾಗಾರಕ್ಕೆ ಸಾಗಿಸ್ತಿರುವಾಗ ಇನ್ನೊಂದು ವಾರ್ಡ್‌ದಲ್ಲಿದ್ದ ಅವನ ಹೆಂಡತಿಯೂ ಪ್ರಾಣಬಿಟ್ಟಳು. ಇನ್ನಿಬ್ಬರೂ ಕೂಡ ಅವತ್ತೇ ತೀರಿಕೊಂಡರು. ಗಣೇಶ ಮತ್ತು ಅವನ ಗೆಳೆಯರು ಶವಸಂಸ್ಕಾರಕ್ಕ ರೆಡಿಯಾದರು. ಇಮಾಮಸಾಬ ಮತ್ತು ಅವನ ಹೆಂಡತಿಯ ಶವಸಂಸ್ಕಾರ ಮಾಡೋದು ತಡ ಆಗಲಿಲ್ಲ. ಇಬ್ಬರನ್ನೂ ಒಂದೇ ಕುಣಿಯಲ್ಲಿ ಮಲಗಿಸಿ ಮಣ್ಣು ಮುಚ್ಚಿದರು. ವಿಡಿಯೋ ಮಾಡಿ ತೋರಿಸುವ ಸಂದರ್ಭವೂ ಇರಲಿಲ್ಲ. ಯಾಕಂದರೆ, ಇದ್ದೊಬ್ಬ ದೊಡ್ಡ ಮಗಳು ಎಲ್ಲಿದ್ದಾಳೋ ಗೊತ್ತಿಲ್ಲ. ಅವರಿಗಾಗಿ ವಿಡಿಯೋ ನೋಡಿ ಅಳುವವರು ಯಾರೂ ಇರಲಿಲ್ಲ. ತಾನೇ ಎರಡು ಹನಿ ಕಣ್ಣೀರು ಸುರಿಸೇನೆಂದರೆ ಸೆಲೆ ಬತ್ತಿ ಹೋದಂತಾಗಿತ್ತು. ಇನ್ನೆರಡು ಹೆಣಗಳನ್ನ ಬಂಧುಗಳಿಗೆ ವಿಡಿಯೋದಲ್ಲಿ ತೋರಿಸಿ ದಹಿಸಬೇಕಾಯಿತು. ಗಣೇಶ ರಾತ್ರಿ ಮಲಗುವ ಹೊತ್ತಿಗೆ ದೈಹಿಕವಾಗಿ, ಮಾನಸಿಕವಾಗಿ ಬಳಲಿದ್ದ.

ಬೆಳಿಗ್ಗೆ ಬೇಗ ಏಳಲಾಗಲಿಲ್ಲ. ಅವ್ವ ಪಾವಟಿಗೆಯ ಮೇಲೆ ಚಹಾದ ಕಿತ್ತಲೆ ಇಟ್ಟು ಹೋಗಿದ್ದಳು. ಎದ್ದು ಮುಖ ತೊಳೆದು ಲೋಟಾಕ್ಕೆ ಚಹಾ ಬಗ್ಗಿಸಿ ಹಾಕ್ಕೊಂಡು ಕುಡೀತಾ ಕುಂತ. ಅಷ್ಟರಲ್ಲಿ ಫೋನು ಬಂತು. ಯಾವುದೋ ನಂಬರ್.

'ನೀವು ಗಣೇಶನಾ?'

'ಹೌದು, ನೀವು?'

'ನಾನು ಜಗದೀಶನ ಗೆಳೆಯ ರಮೇಶ ಅಂತ. ನಿಮ್ಮ ಬಗ್ಗೆ ಜಗ್ಗು ಹೇಳಿದ್ದ. ಅವನ ಫೋನ್‌ದಲ್ಲಿ ನಿಮ್ಮ ನಂಬರ್ ಇತ್ತು.'

'ಹೆಂಗಿದಾನ, ಹೆಂಗಿದಾನ?' ಆತಂಕದಿಂದಲೇ ವಿಚಾರಿಸಿದ.

'ವೆರಿ ಸಾರಿ... ಈಗ ಅವನಿಲ್ಲ... ಹೋಗಿಬಿಟ್ಟ ನಿನ್ನೆ.'

ಸ್ವಲ್ಪ ಹೊತ್ತು ಎರಡೂ ಕಡೀಗೆ ಮಾತು ನಿಂತವು.

ಸುಧಾರಿಸಿಕೊಳ್ಳುತ್ತಾ 'ಏನಾಯ್ತು?' ಅಂದ.

'ಅವನು ಬಂದ ರಾತ್ರಿಯೇ ಸುಸ್ತಾಗಿ ಕಂಡ. ಪ್ರವಾಸದಿಂದ ಆಯಾಸ ಆಗಿರಬೇಕು ಅನಿಸಿತು. ರಾತ್ರಿ ಸೊಲ್ಪ ಉಂಡು ಪ್ಯಾರಸ್ಯಾಟೆಮಲ್ ಗುಳಿಗೆ ನುಂಗಿ ಮಲಕೊಂಡ. ಬೆಳಿಗ್ಗೆ ಜ್ವರ ಅಂದ. ನಾಷ್ಟಾ ಪೂರ್ತಿ ಮಾಡಲಿಲ್ಲ. ತಪಾಸ್ ಮಾಡಿಸಿದರೆ ಪಾಸಿಟಿವ್ ಬಂತು. ಕೊರೊನಾ ವಾರ್ಡಿಗೆ ಅಡ್ಮಿಟ್ ಮಾಡಿದರು ಡಾಕ್ಟರು. ಅವರು ಕೊರೊನಾ ಸ್ಪೆಷಲಿಸ್ಟ್ ಆಗಿ ಹೆಸರು ಮಾಡಿದವರೇ.

ಅಡ್ಮಿಟ್ ಆದ ಕೂಡಲೇ ಊರಿಗೆ ಫೋನ್ ಮಾಡ್ತೀನಿ ಅಂದೆ. ಜಗ್ಗುನೇ 'ಮನಿಯಲ್ಲಿ ಈ ವಿಷಯ ತಿಳಿಸೋದು ಬ್ಯಾಡ, ಗಾಬರಿ ಆಗತಾರ, ವಯಸ್ಸಾದ